ದಿನಾಂಕ : 05.09.2022 - - ಓ.ಎಸ್. 88/2019 ರಲ್ಲಿ
ಪಿ.ಡಬ್ಲ್ಯೂ-1(ನಳಿನ ಆರ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ ಎಸ್ ಆರ್ ವಕೀಲರಿಂದಃ

ಪ್ರತಿವಾದಿಯರಿಗೆ ಬೇರೆ ಮನೆಯನ್ನು ನೋಡಲು ಮತ್ತು ಮನೆಯನ್ನು ಖಾಲಿ ಮಾಡಲು 11 ತಿಂಗಳು ಕಾಲ ಬೇಕು ಎಂದು ಹೇಳಿದ ಬಗ್ಗೆ ನಿಪಿ-1ರ ಕರಾರು ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ 2ನೇ ಮಹಡಿಯಲ್ಲಿ ಪ್ರತಿವಾದಿಗಳು ವಾಸವಿರುತ್ತಾರೆ ಎಂದರೆ ಸರಿ. ನಾನು ಪ್ರಸ್ತುತ ದಾವೆ ಸಲ್ಲಿಸಿದ ನಂತರ 1ನೇ ಪ್ರತಿವಾದಿ ಮನೆ ಬಿಟ್ಟು ಹೋಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ-1ರ ಕರಾರು ಪತ್ರದಲ್ಲಿ 2ನೇ ಮಹಡಿ ಇದ್ದ ಬಗ್ಗೆ ಎಲ್ಲೂ ಬರೆಸಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಗಳ ಮಧ್ಯೆ ಆದ ಮಾತುಕತೆ ಹಣದ ವ್ಯವಹಾರವಾಗಿರುವ ಕಾರಣ ಷಡ್ಯೂಲ್ ಸ್ವತ್ತಿನ ಬಗ್ಗೆ ಹೆಚ್ಚಾಗಿ ನಾನು ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1ರ ಸಾಕ್ಷಿದಾರರಾಗಿ ಸಹಿ ಮಾಡಿರುವ ಚಿಕ್ಕರಾಮಯ್ಯನವರು ನಮ್ಮ ಮಾವ ಎಂದರೆ ಸರಿ. 2ನೇ ಸಾಕ್ಷಿದಾರ ಎಂದು ಸಹಿ ಮಾಡಿರುವ ಎಸ್ ಮಂಜುನಾಥರವರ ಪರಿಚಯ ನನಗೆ ಇರುವುದಿಲ್ಲ. ಚಿಕ್ಕರಾಮಯ್ಯ ಮತ್ತು ಮಂಜೂನಥರವರು ನನ್ನ ಪರಿಚಯಸ್ಥರಾಗಿದ್ದು ಅವರೇ ನಿಂತು ಕರಾರು ಪತ್ರವನ್ನು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ಮಧ್ಯೆ ಆದ ಹಣ ವ್ಯವಹಾರದ ಮಾತುಕತೆಯನ್ನು ನನ್ನ ಮಾವನನವರೇ ಅಂದರೆ 1ನೇ ಸಾಕ್ಷಿದಾರರೇ

ಮಧ್ಯವರ್ತಿಯಾಗಿರುತ್ತಾರೆ ಎಂದರೆ ಸರಿ.

ನಿಪಿ-1 ರ ಕರಾರು ಪತ್ರದಂತೆ ನಾನು ಕ್ರಯ ಪತ್ರ ಬರೆಸಿಕೊಳ್ಳಲು ಸಿದ್ದವಿದ್ದ ಬಗ್ಗ ನಿಪಿ-5 ನ್ನು ಹೊರತುಪಡಿಸಿ 11 ತಿಂಗಳ ಒಳಗೆ ಬೇರೆ ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು 11 ತಿಂಗಳಲ್ಲಿ ನಾನು ಹಲವಾರು ಬಾರಿ ಕ್ರಯ ಪತ್ರ ಬರೆದುಕೊಡುವಂತೆ ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-5 ರಂತೆ ನೀಡಿರುವ ನೋಟಿಸ್ ನಲ್ಲಿ 11 ತಿಂಗಳ ಅವಧಿಯಲ್ಲಿ ನಾನು ಪ್ರತಿವಾದಿಯವರನ್ನು ದಾವಾ ಆಸ್ತಿ ಸಂಬಂಧಿಸಿದ ದಾಖಲೆಗಳನ್ನು ನೀಡಬೇಕೆಂದು ಹೇಳಿ ಕೇಳಿರುವ ಬಗ್ಗೆ ನೋಟಿಸ್ ನಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು 11 ತಿಂಗಳು ವಾಯಿದೆ ಇದ್ದ ಕಾರಣ ನಾನು ಆ ಬಗ್ಗೆ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಪ್ರತಿವಾದಿಗಳ ಮಧ್ಯೆ ಹಣಕಾಸಿನ ವ್ಯವಹಾರವಾಗಿರುವ ಕಾರಣ ದಾವಾ ಆಸ್ತಿಯ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಗೆ ಪಾವತಿಸಿದ ಕಂದಾಯ ರಶೀದಿಯನ್ನು ನೋಡಿರುತ್ತೇನೆ. ಆ ದಾಖಲೆಯ ಜೆರಾಕ್ಸ್ ಪ್ರತಿಯನ್ನು ಕರಾರು ಪತ್ರವಾಗುವ ಸಮಯದಲ್ಲಿ ನನಗೆ ನೀಡಿದ್ದರು ಎಂದರೆ ಸರಿ. ಕ್ರಯ ಪತ್ರ ಬರೆಸಿಕೊಳ್ಳಲು ಬಾಕಿ 15 ಲಕ್ಷ ನನ್ನ ಬಳಿ ಇಲ್ಲದೇ ಇದ್ದ ಕಾರಣ ನಾನು ಪ್ರತಿವಾದಿಯರಲ್ಲಿ 11 ತಿಂಗಳ ಒಳಗೆ ಕ್ರಯ ಪತ್ರ ಮಾಡಿಕೊಡುವಂತೆ ಕೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಉಳಿಕೆ ಹಣವನ್ನು ನೀಡಿಲು ನನ್ನ ಬಳಿ ಇದೆ ಎಂದು ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲೆ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿರವರ ಕುಟುಂಬದ ಬಗ್ಗೆ ನನಗೆ ತಿಳಿದಿರುತ್ತದೆ. ಪ್ರತಿವಾದಿಯವರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ನನಗೆ ವಾಸಕ್ಕೆ ಸ್ವಂತ ಒಂದು ಮನೆ ಇರುತ್ತದೆ. ಅದೇ ಮನೆಯಲ್ಲಿ ಕೆಳಗೆ ಬಾಡಿಗೆಗೆ ನೀಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯರು ನನ್ನ ಹೆಸರಿಗೆ ದಾವಾ ಆಸ್ತಿಯನ್ನು ಕ್ರಯ ಪತ್ರ ಮಾಡಿಕೊಟ್ಟರೇ ಅವರು ಬೀದಿಗೆ ಬಂದುಬಿಡುತ್ತಾರೆ ಎಂದರೆ ಸಾಕ್ಷಿಯು ರಾಮನಗರದಲ್ಲಿ ನನಗೆ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ಹಿಂದೆ ರಾಮನಗರ ಜಿಲ್ಲೆಯ ಶ್ರೀನಿವಾಸಗೌಡ ರವರ ವಿರುದ್ಧ ದಾವೆ ಮಾಡಿ ನನ್ನಂತೆಯೇ ಆಗಿರುತ್ತದೆ ಎಂದು ನುಡಿದಿದ್ದು, ಸದರಿ ಆಸ್ತಿಯು ಖಾಲಿ ನಿವೇಶನವಾಗಿರುತ್ತದೆ ಎಂದರೆ ಸರಿ. ನಮ್ಮ ಪರವಾಗಿ ದಾವೆ ಡಿಕ್ರಿಯಾದರೆ ಪ್ರತಿವಾದಿಗಳಿಗೆ ತುಂಬಾ ನಷ್ಟವಾಗುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.